ಈ ದಿನ ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಅರ್ ಜೆ ವಕೀಲರಿಂದಃ</u>**

ಚನ್ನಬಸಪ್ಪ ಬಿನ್ ಮಾವಿನಹೊಳೆಯಪ್ಪರವರಿಗೆ 3 ಜನ ಗಂಡು ಮಕ್ಕಳು. 4 ಜನ ಹೆಣ್ಣುಮಕ್ಕಳು ಎಂದರೆ ಸರಿ. ಅವರೆಂದರೆ ಗಂಗಮ್ಮ, ಸಿದ್ದರಾಮಪ್ಪ/ಪ್ರತಿವಾದಿ, ನನ್ನ ತಂದೆಯಾದ ನಾಗೇಂದ್ರಪ್ಪ, ಕಮಲಮ್ಮ, ಮಂಜಮ್ಮ , ಪರಮೇಶ್ವರಪ್ಪ/3ನೇ ವಾದಿ , ಕೊನೆಯವರು ಕೋಮಲ. ಅವರಲ್ಲಿ ಗಂಗಮ್ಮರವರು ವಿವಾಹದ ನಂತರ ಮರಣಹೊಂದಿರುತ್ತಾರೆ ಎಂದರೆ ಸರಿ. ಅವರಿಗೆ 5 ಜನಮಕ್ಕಳು ಎಂದರೆ ಸರಿ. ಅವರೆಂದರೆ ರಾಜಪ್ಪ , ಚಂದ್ರಪ್ಪ , ನಂಜಮ್ಮ, ಗಿರಿಜಮ್ಮ ಮತ್ತು ಬಸಮ್ಮ ಎಂದರೆ ಸರಿ. ಸದರಿಯವರನ್ನು ಈ ದಾವೆಗೆ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ.

ಚನ್ನಬಸಪ್ಪನ 4, 5 ಮತ್ತು 7 ನೇ ಹೆಣ್ಣು ಮಕ್ಕಳಾದ ಕಮಲಮ್ಮ, ಮಂಜಮ್ಮ ಮತ್ತು ಕೋಮಲರವರು ಜೀವಂತವಿದ್ದಾರೆ. ನನ್ನ ತಂದೆಯ ಹಿಸ್ಸೆಗೆ ಸರ್ವೆ ನಂ 10/3 ರಲ್ಲಿ 25 ಗುಂಟೆ ಜಮೀನು, ಸರ್ವೆ ನಂ 21/6ರಲ್ಲಿ 3 ಎಕರೆ 11 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಪ್ರಸ್ತುತ ನಾವು ವಾಸವಿರುವ ಮಾಚನಾಯ್ಕನಹಳ್ಳಿಯ 3 ಗುಂಟೆ ಜಮೀನನ್ನು ಚೆನ್ನಬಸಪ್ಪನವರು ಕೊಟ್ಟಿದ್ದರು ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ಈ ದಾವೆಯ ಪ್ರತಿವಾದಿ 1974ರಿಂದಲೇ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿಯವರು 1981ರಲ್ಲಿ ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ಕಂಪನಿಯಲ್ಲಿ ಟೆಕ್ನಿಶಿಯನ್ ಆಗಿ ಕೆಲಸಕ್ಕೆ ಸೇರಿದ್ದು ಅಲ್ಲೆ ವಾಸಿಸುತ್ತಿದ್ದರು ಎಂದರೆ ಸರಿ. ಸದರಿಯವರು ನಿವೃತ್ತಿ ಹೊಂದಿದ ನಂತರ ಮಾಚನಾಯ್ಕನಹಳ್ಳಿಯಲ್ಲಿ ಬಂದು ವಾಸಿಸಲು ದಾವಾಸ್ತಿಯಾದ 45 ಇಂಟು 114ಅಡಿ ವಿಸ್ತೀರ್ಣದ ಆಸ್ತಿಯಲ್ಲಿ ತನ್ನ ತಂದೆಯಿಂದ 03-08-1995 ರಲ್ಲಿ ದಾವಾಸ್ತಿಯಲ್ಲಿ 35 ಇಂಟು 60 ಅಡಿಯ ಆಸ್ತಿಯನ್ನು ಶುದ್ದ ಕ್ರಯಕ್ಕೆ ನಿಪಿ-3 ರಂತೆ ಪಡೆದಿದ್ದರು ಎಂದರೆ ಸಾಕ್ಷಿ

ಸದರಿ ಆಸ್ತಿ ಪಿತಾರ್ಜಿತ ಆಸ್ತಿಯಾದ ಕಾರಣ ನನ್ನ ಅಜ್ಜ ಕೊಡಲು ಹಕ್ಕು ಇಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-3 ನ್ನು ನಾವು ಇದುವರೆಗೂ ನಾನಾಗಲೀ ಅಥವಾ ನನ್ನ ತಂದೆಯಾಗಲಿ ಯಾವ ನ್ಯಾಯಾಲಯದಲ್ಲಿಯೂ ಸಹ ಪ್ರಶ್ನಿಸಿಲ್ಲ ಎಂದರೆ ಸರಿ. ನಿಪಿ-3 ನ್ನು ಕ್ರಯಕ್ಕೆ ಪಡೆದ ಸಮಯಕ್ಕೆ ಸದರಿ ಖರೀದಿಸಿದಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಕೆ ಬಿ ಸಿದ್ದರಾಮಪ್ಪನವರ ಹಿತ್ತಲು, ಪಶ್ಚಿಮಕ್ಕೆ ದಾರಿ ಮತ್ತು ಈಶ್ವರಪ್ಪರ ಸಿದ್ದಪ್ಪರ ತೋಟ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಪ್ರತಿವಾದಿಯ ತಂದೆಯಾದ ಚೆನ್ನಬಸಪ್ಪನವರ ಉಳಿದ ಖಾಲಿ ಜಾಗ ಎಂದು ನಮೂದು ಇತ್ತು ಎಂದರೆ ಸರಿ.

ಪ್ರತಿವಾದಿ ನಿಪಿ-3 ರಂತೆ ಕ್ರಯಕ್ಕೆ ಪಡೆದ ಆಸ್ತಿಯಲ್ಲಿ ಒಂದು ಕೆಂಪು ಹೆಂಚಿನ ಮನೆ ಮತ್ತು ಆರ್ ಸಿ ಸಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿ ಖರೀದಿ ಮಾಡಿದ ಆಸ್ತಿಗೆ ಪಂಚಾಯತಿಯವರ ಖಾತಾ ನಂ 131 ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಿಪಿ-3 ರಂತೆ ಖರೀದಿಸಿದ ಆಸ್ತಿ ದಾವಾಸ್ತಿಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ.

ನನ್ನ ತಂದೆ ನಾಗೇಂದ್ರಪ್ಪ , ಪ್ರತಿವಾದಿ ಮತ್ತು 3ನೇ ವಾದಿಯವರು 1999-2000 ನೇ ಸಾಲಿನಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದರಂತೆ ಪ್ರತಿವಾದಿಗೆ ಸರ್ವೆ ನಂ 10/3ರಲ್ಲಿ 1 ಎಕರೆ 17 ಗುಂಟೆ, 3 ನೇ ವಾದಿಗೆ ಅದೇ ಸರ್ವೆ ನಂಬರಿನಲ್ಲಿ 28 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಸದರಿಯವರ ಹಿಸ್ಸೆಗೆ ಬಂದ ಜಮೀನುಳ ವಿಸ್ತೀರ್ಣವನ್ನು ಗಮನಿಸಿದರೆ ನನ್ನ ತಂದೆಗೆ ಹೆಚ್ಚು ವಿಸ್ತೀರ್ಣದ ಜಮೀನನ್ನು ಹಂಚಿಕೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನು ಬಂಡೆ ಭೂಮಿ ಎಂದು ಹೆಚ್ಚಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳಲ್ಲಿ ಪ್ರಸ್ತುತ ತೋಟ ಮಾಡಿದ್ದೇವೆ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

-

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.